# ಸ್ವಾತಂತ್ರ್ಯ ಹೋರಾಟಗಾರ ಲಕ್ಷ್ಮಣ ಡಾಂಗೆ

**ವಿರೂಪಾಕ್ಷಿ ಎನ್.ಬಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ.

DOI: https://doi.org/10.5281/zenodo.17411551

## ABSTRACT:

ಅಣ್ಣಪ್ಪ ಡಾಂಗೆ ಅವರು ಬೆಳಗಾವಿಯ ನೆಲದಮರೆಯ ನಿಧನದಂತೆ ಜೀವಿಸಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ರಾಯಭಾಗ ತಾಲೂಕಿನ ಇಟನಾಳ ಗ್ರಾಮದಲ್ಲಿ ಜನಿಸಿದ ಅವರು ಸ್ವಾತಂತ್ರ್ಯ ಹೋರಾಟದ ಬರೆಹಗಳನ್ನು ಓದಿ ಪ್ರೇರಿತರಾಗಿ ಏಳನೆಯ ತರಗತಿಯಲ್ಲಿ ಓದುತ್ತಿರುವಾಗಲೇ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿ, ರಾಷ್ಟ್ರೀಯ ಕಾಂಗ್ರೆಸ್ಸಿನ ಸಕ್ರಿಯ ಕಾರ್ಯಕರ್ತರಾದರು. ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಸುಭಾಸ್ ಚಂದ್ರಬೋಸ್ ಮುಂತಾದ ಮಹನೀಯರ ಆದರ್ಶ ಜೀವನವೇ ಡಾಂಗೆ ಅವರಿಗೆ ಮಾರ್ಗದರ್ಶಿಯಾಯಿತು. ಹಿಡಕಲ್ಲು ಗ್ರಾಮದಲ್ಲಿ ರಾಮಪ್ಪ ಕಂಕಣವಾಡಿ ಮತ್ತು ತರುಣ ಹೋರಾಟಗಾರರಿಂದ ಸಂಘಟಿತಗೊಂಡ ಚಳಿವಳಿಕಾರರ ಗುಂಪನ್ನು ಸೇರಿ ಆ ಹೋರಾಟಗಾರರು ರೂಪಿಸಿದ ಎಲ್ಲಾ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದರು. ಹಳ್ಳಿಗಳನ್ನು ಸುತ್ತಿ ಜನರಲ್ಲಿ ಸ್ವಾತಂತ್ರ್ಯ ಹೋರಾಟದ ಜಾಗೃತಿ ಮೂಡಿಸುತ್ತಿದ್ದರು. ಚಳುವಳಿಗಾರರ ಗುಂಪಿನ ಜೊತೆಗೂಡಿ ಮಹಾಲಿಂಗಪೂರ ಪೋಸ್ಟ್ ಆಫೀಸನ್ನು ಸುಟ್ಟು ಹಾಕುವ, ಕುಡಚಿಜಮಖಂಡಿ ರಸ್ತೆಯ ಹಾರೂಗೇರಿ ಕ್ರಾಸ್ ಮತ್ತು ಯಬರಟ್ಟಿ ಮಧ್ಯದ ಟೆಲಿಗ್ರಾಫ್ ತಂತಿಯನ್ನು ಕತ್ತರಿಸುವ, ಯಲ್ಪಾರಟ್ಟಿ ಬಂಗಲೆ, ಸುಲದಾಳ ರೇಲ್ವೇ ಸ್ಟೇಷನ್ ಹಾಗೂ ರಾಯಬಾಗ ರೇಲ್ವೇ ಸ್ಟೇಷನ್ ಸುಡುವ ಕಾರ್ಯದಲ್ಲಿಯೂ ಭಾಗಿಗಳಾಗಿದ್ದರು. ಹಾಗಾಗಿ ಸಾಕಷ್ಟು ಬಾರಿ ಲಕ್ಷ್ಮಣ ಅಣ್ಣಪ್ಪ ಡಾಂಗೆ ಅವರು ಸೆರೆಮನೆ ವಾಸ ಅನುಭವಿಸಿದರು.

## KEYWORDS:

ಲಕ್ಷ್ಮಣ ಡಾಂಗೆ, ಹಿಡಕಲ್ಲು, ಸಮಾಜಮುಖಿ ಕಾರ್ಯಗಳು, ಉಚಿತ ಪ್ರಸಾದ ನಿಲಯ.

**ಪ್ರಸ್ತಾವನೆ:**

ಬ್ರಿಟೀಷ್ ವಸಾಹತುಶಾಹಿಯು ಭಾರತವನ್ನು ಎರಡು ನೂರು ವರ್ಷಗಳ ಕಾಲ ತನ್ನ ಅಧೀನದಲ್ಲಿ ಇಟ್ಟುಕೊಂಡು ಆಳ್ವಿಕೆ ಮಾಡಿತು. ಆಂಗ್ಲರ ಸಂಕೋಲೆಯಿಂದ ಭಾರತವನ್ನು ಸ್ವತಂತ್ರಗೊಳಿಸಲು ಸಾಕಷ್ಟು ಹೋರಾಟಗಳು ನಡೆದವು. ಅದರಲ್ಲಿಯೂ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿತು. ಆದರೆ ಭಾರತೀಯ ಮುಂದಾಳುಗಳು ಸ್ವಾತಂತ್ರ್ಯವನ್ನು ಪಡೆಯಲು ಎರಡು ರೀತಿಯಲ್ಲಿ ಪ್ರಯತ್ನಿಸುತ್ತಿದ್ದರು. ಅವರೇ ಮಂದಗಾಮಿಗಳು ಮತ್ತು ತೀವ್ರಗಾಮಿಗಳು. ಆಳುವ ಬ್ರಿಟೀಷ್ ಆಧಿಪತ್ಯಕ್ಕೆ ಮನವಿ ಸಲ್ಲಿಸಿ ರಾಜಕೀಯ ಸುಧಾರಣೆಗಳನ್ನು ತಂದು ಹಂತ ಹಂತವಾಗಿ ಸ್ವಾತಂತ್ರ್ಯ ಪಡೆಯುತ್ತ ಹೋಗಬೇಕೆಂಬುದು ಮಂದಗಾಮಿ ನಾಯಕರ ವಿಚಾರವಾಗಿದ್ದರೆ, ತೀವ್ರಗಾಮಿಗಳು ಶಸ್ತ್ರಾಸ್ತ್ರಗಳ ಮೂಲಕವೇ ಆಳುತ್ತಿದ್ದ ಬ್ರಿಟಿಷರನ್ನು ಎದುರಿಸಬೇಕೆಂದು ಯೋಜನೆಗಳನ್ನು ರೂಪಿಸುತ್ತಿದ್ದರು. ವಿಪರ್ಯಾಸ ಎಂದರೆ ಈ ಎರಡೂ ಮುಂದಾಳತ್ವಗಳೂ ಕೋಟ್ಯಾಂತರ ಜನಸಾಮಾನ್ಯ ಭಾರತೀಯರಿಗೆ ತಲುಪಲಿಲ್ಲ. ಬ್ರಿಟೀಷರು ಮಂದಗಾಮಿ ಮತ್ತು ತೀವ್ರಗಾಮಿಗಳ ನಡುವಿನ ತಿಕ್ಕಾಟವನ್ನೇ ಬಂಡವಾಳವಾಗಿಸಿಕೊಂಡು ನಿರಾಯಾಸವಾಗಿ ಆಡಳಿತ ಮುಂದುವರಿಸಿದ್ದರು. ಮಹಾತ್ಮ ಗಾಂಧೀಜಿ ಅವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಬಂದು ಕಾಂಗ್ರೆಸ್ಸಿನ ಮುಂದಾಳತ್ವ ವಹಿಸಿ, ಸ್ವರಾಜ್ಯ ಹೇಗೆ ಪಡೆಯಬೇಕೆಂಬುದರ ಕುರಿತಂತೆ ತಮದೇ ಆದ ವಿನೂತನ ಸಾಧನ ಕ್ರಮವೊಂದನ್ನು ರೂಪಿಸಿದರು. ಅದೇ ಅಹಿಂಸಾತ್ಮಕ ಹೋರಾಟ. ಮಹಾತ್ಮ ಗಾಂಧೀಜಿ ಅವರು ಆರಂಭಿಸಿದ ಅಹಿಂಸಾತ್ಮಕ ಹೋರಾಟದ ಕರೆಯು ದೇಶದ ಉದ್ದಗಲಕ್ಕೂ ಹಳ್ಳಿಪಟ್ಟಣಗಳೆನ್ನದೆ, ಹಿರಿಕಿರಿಯರೆಲ್ಲದೆ ಎಲ್ಲರ ಹೃದಯಗಳಲ್ಲಿಯೂ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿತು. ಗಾಂಧೀಜಿಯ ಕರೆಗೆ ಓಗೊಟ್ಟು ಲಕ್ಷಾಂತರ ಯುವಕಯುವತಿಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಅವರ ಹೃದಯದಲ್ಲಿ ಹೊತ್ತಿದ ಸ್ವಾತಂತ್ರ್ಯದ ಹಣತೆಯ ಜ್ಯೋತಿ ಅದೆಷ್ಟೋ ಯುವಕರ ರಕ್ತದಲ್ಲಿಯೇ ಬೆಳಗಿತು. ಬ್ರಿಟೀಷ್ ಸೈನಿಕರ ಮದ್ದುಗುಂಡುಗಳಿಗೆ ಎದೆಯೊಡ್ಡಿ ಪ್ರಾಣ ಕಳೆದುಕೊಂಡವರೆಷ್ಟೋ? ತಮ್ಮ ಕೊರಳಿಗ್ಹಾಕಿದ ನೇಣುಕುಣಿಕೆಯನ್ನೇ ಹೂವಿನ ಹಾರವಾಗಿಸಿಕೊಂಡವರೆಷ್ಟೋ? ತಾಯ್ನೆಲದ ಸ್ವಾತಂತ್ರ್ಯಕ್ಕಾಗಿ ಮನೆ ಮಠಗಳನ್ನು ತೊರೆದು ಸೆರೆಮನೆ ವಾಸ ಅನುಭವಿಸಿದವರೆಷ್ಟೋ? ಭೂಗತರಾದವರೆಷ್ಟೋ? ಈ ಎಲ್ಲಾ ಮಹನೀಯರ ತ್ಯಾಗ ಬಲಿದಾನಗಳ ಪ್ರತಿಫಲವಾಗಿ 1947ರ ಆಗಸ್ಟ್ 15ರಂದು ನಮ್ಮ ಭಾರತವು ಸ್ವಾತಂತ್ರ್ಯವಾಯಿತು. ಸ್ವಾತಂತ್ರ್ಯ ದೊರೆತ ಕೂಡಲೆ ಖಾದಿ ತೊಟ್ಟವರಿಗೆ ಮನ್ನಣೆ ದೊರೆಯಹತ್ತಿದ್ದನ್ನು ಕಂಡು ಪ್ರತಿಯೊಬ್ಬರೂ ತಾನೂ ಸ್ವಾತಂತ್ರ್ಯ ಹೋರಾಟಗಾರ, ದೇಶಭಕ್ತ, ಜೈಲಿಗೆ ಹೋದವ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತ ತಮತಮಗೆ ಬೇಕಾದಂತೆ ಕಟ್ಟುಕತೆ ಕಲ್ಪಿಸಿಕೊಂಡು ನಿಜವಾದ ಹೋರಾಟಗಾರರು ಕಣ್ಮರೆಯಾಗುವಂತೆ ಮಾಡಿದರು. ಇದರಲ್ಲಿ ದುಡ್ಡು, ಜಾತಿ, ಭಾಷೆ, ರಾಜಕೀಯ ಪಕ್ಷಗಳ ಪಾಲು ಸಮನಾಗಿಯೇ ಸೇರಿದೆ. ಹಾಗಾಗಿ ನಿಜವಾಗಿಯೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಲ್ಲಿ ಮುನ್ನೆಲೆಗೆ ಬಂದವರಿಗಿಂತಲೂ ಎಲೆಮರೆಯ ಕಾಯಿಯಂತೆ ಜೀವಿಸಿದವರೇ ಹೆಚ್ಚು. ಈ ಮಾತು ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮಕ್ಕೂ ಅನ್ವಯಿಸುತ್ತದೆ. ಕರ್ನಾಟಕದಾದ್ಯಂತ ನಿಜವಾಗಿಯೂ ಸ್ವಾತಂತ್ರ್ಯಕ್ಕಾಗಿ ದುಡಿದವರು ಯರ್‌ಯಾರು ಎಂಬ ಶೋಧನೆ ಇತ್ತೀಚಿನ ವರ್ಷಗಳಲ್ಲಿ ಕ್ಷೇತ್ರಕಾರ್ಯ ಆಧಾರಿತವಾಗಿ ನಡೆಯುತ್ತಿರುವುದು ಸಂತಸದ ಸಂಗತಿ. ಇತ್ತೀಚಿನ ಸಂಶೋಧಕರು ಜನರ ಹತ್ತಿರವೆ ಹೋಗಿ ಚರ್ಚೆ ಮಾಡಿ ಸತ್ಯಾಂಶವನ್ನು ಹೊರತೆಗೆದು ಎಲೆಮರೆಯ ನಿಧನಗಳಂತೆ ಬದುಕಿದ ಸ್ವಾತಂತ್ರ್ಯ

ಹೋರಾಟಗಾರರ ಬದುಕನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಪ್ರಸ್ತುತ ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಅವಲೋಕಿಸುವುದಾದರೆ ಸೂರ್ಯನಾಥ್ ಕಾಮತ್ ಅವರು ಬರೆದಿರುವ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಹೆಸರಿನ ಸಂಪುಟ ಮೂರರಲ್ಲಿ ರಾಯಭಾಗ ಪರಿಸರ ಹಿಡಕಲ್ಲ ಗ್ರಾಮದ ಇಮಾಮ್ ಸಾಹೇಬ, ಹುಸೇನ್ ಸಾಹೇಬ ಮುಲ್ಲಾ ಅವರ ಹೋರಾಟದ ಚಿತ್ರಣವನ್ನು ಉಲ್ಲೇಖಿಸಿದ್ದಾರೆ. ಇನ್ನು ಬಾಲಾಜಿ ಯಮಾಜಿ ದೇಶಪಾಂಡೆ ಅವರು 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಪುಟಗಳಲ್ಲಿ ರಾಯಬಾಗ ಪರಿಸರದ ಹಿಡಕಲ್ಲ ಗ್ರಾಮದ ಸ್ವಾತಂತ್ರ್ಯ ಚಳುವಳಿಗಾರರು 1942ರ 'ಚಲೆಜಾವ್' ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆಯ ವಾಸ ಅನುಭವಿಸಿದ 14 ಜನ ಹೋರಾಟಗಾರರ ಹೆಸರು ಮತ್ತು ಕಾರವಾಸದ ಅವಧಿಯನ್ನು ದಾಖಲಿಸಿದ್ದಾರೆ. ಸರೋಜಿನಿ ಚವರಾಲ ಅವರು 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು' ಕೃತಿಯಲ್ಲಿ ಬೆಳಗಾವಿ ಪರಿಸರದ ಸ್ವಾತಂತ್ರ್ಯ ಹೋರಾಟಗಾರರ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ರಾಯಭಾಗ ಪರಿಸರದ ಹಿಡಕಲ್ಲ ಗ್ರಾಮದ ವಾಸುದೇವ ಅಲ್ಲಪ್ಪ ನಾಯಕನ ಹೋರಾಟದ ಬದುಕನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದು, ಅದರಲ್ಲಿ ಅವರ ಜೊತೆಗೆ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಸಹಚರರ ಹೆಸರುಗಳನ್ನು ನೀಡಿದ್ದಾರೆ. ಬಾಲಾಜಿ ಯಮಾಜಿ ದೇಶಪಾಂಡೆ ಹಾಗೂ ಸರೋಜಿನಿ ಚವರಾಲ ಅವರ ಕೃತಿಗಳಲ್ಲಿ ಹೆಸರಿಸಲ್ಪಟ್ಟ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಎಲೆಮರೆಯ ನಿಧನದಂತೆ ಬದುಕಿದ ಲಕ್ಷ್ಮಣ ಅಣ್ಣಪ್ಪ ಡಾಂಗೆ ಅವರ ಸ್ವಾತಂತ್ರ್ಯ ಹೋರಾಟ ಹಾಗೂ ನಂತರದ ಅವರ ಸಾಮಾಜಿಕ ಬದುಕಿನ ವಿವಿಧ ಮಜಲುಗಳನ್ನು ಈ ಬರೆಹದಲ್ಲಿ ಪರಿಚಯ ಮಾಡಿಕೊಡಲಾಗಿದೆ.

**ಆರಂಭಿಕ ಜೀವನ ಮತ್ತು ಏಳಿಗೆ:**

ಲಕ್ಷ್ಮಣ ಅಣ್ಣಪ್ಪ ಡಾಂಗೆ ಅವರು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಇಟನಾಳ ಗ್ರಾಮದಲ್ಲಿ 06091922ರಲ್ಲಿ ಅಣ್ಣಪ್ಪ ಮತ್ತು ಕಾಶೆವ್ವ ದಂಪತಿಗಳ ಉದರದಲ್ಲಿ ಜನಿಸಿದ ಅವಳಿ ಮಕ್ಕಳಲ್ಲಿ ಒಬ್ಬರು. ಹೆತ್ತವರು ಅವಳಿ ಮಕ್ಕಳಲ್ಲಿ ಹಿರಿಯಾತನ ಹೆಸರನ್ನು ರಾಮಣ್ಣ ಎಂದು, ಕಿರಿಯಾತನಿಗೆ ಲಕ್ಷ್ಮಣ ಎಂದು ಹೆಸರಿಟ್ಟರು. ಊರಲ್ಲಿ ಈ ಸಹೋದರರನ್ನು ಸೂರ್ಯಚಂದ್ರರೆಂದು ಕರೆಯುತ್ತಿದ್ದರು. ತಂದೆ ಅಣ್ಣಪ್ಪನಿಗೆ ಮಕ್ಕಳನ್ನು ವಿದ್ಯಾವಂತರಾಗಿಸಬೇಕೆಂಬ ಬಯಕೆಯಿತ್ತು. ಇಟನಾಳ ಕುಂದರವಾಡ ಮರಾಠ ಸಂಸ್ಥಾನದಲ್ಲಿ ಕೂಡಿದ್ದರಿಂದ ಊರಲ್ಲಿ ಮರಾಠಿ ಹರಕುಮುರುಕು ಶಾಲೆಯೊಂದಿತ್ತು. ಆರಂಭದ ಪ್ರಾಥಮಿಕ ಶಿಕ್ಷಣವನ್ನು ಮರಾಠಿಯಲ್ಲಿಯೇ ಪಡೆದು, 1938ರಲ್ಲಿ ಹಿಡಕಲ್ಲ ಗ್ರಾಮದ ಕನ್ನಡ ಪ್ರಾಥಮಿಕ ಶಾಲೆಗೆ ಸೇರಿದರು. ಸಂಬಂಧಿಕರಾದ ಕಂಕಣವಾಡಿಯವರ ಮನೆಯಲ್ಲಿದ್ದುಕೊಂಡು ಶಿಕ್ಷಣವನ್ನು ಮುಂದುವರಿಸಿದರು. ಶಾಲೆಯಲ್ಲಿ ಜಾಣ ವಿದ್ಯಾರ್ಥಿಯೆಂದು ಹೆಸರಾಗಿದ್ದ ಡಾಂಗೆ ಅವರು ಸ್ವಾತಂತ್ರ್ಯ ಹೋರಾಟದ ಬರೆಹಗಳನ್ನು ಓದಿ ಪ್ರೇರಿತರಾಗಿ ಏಳನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಅಂದರೆ 1935ರಲ್ಲಿಯೇ ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿ, ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕರ್ತರಾದರು. ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಸುಭಾಸ್‌ಚಂದ್ರಬೋಸ್ ಮುಂತಾದ ಮಹನೀಯರ ಆದರ್ಶ ಜೀವನವೇ ಡಾಂಗೆ ಅವರಿಗೆ ಮಾರ್ಗದರ್ಶಿಯಾಯಿತು. ಜೊತೆಜೊತೆಗೆ ಕರ್ನಾಟಕದ ವೀರ ಮಹಿಳೆಯರ ಹೆಸರುಗಳು ಚೇತನ ನೀಡಿದಂತಾಗಿ 'ಭಾರತ ಮಾತಾಕಿ ಜೈ' ಮಂತ್ರ ನಿತ್ಯದ ಮಂತ್ರವಾಯಿತು. ಖಾದಿ ಬಟ್ಟೆ ಧರಿಸುವುದು ಮತ್ತು ಖಾದಿಯ ಪ್ರಚಾರ ಮಾಡುವುದೇ ಅವರ ನಿತ್ಯ ಕಾಯಕವಾಯಿತು. ಚೆನ್ನಾಗಿ ಓದುತ್ತಿರುವ ಮಗ ಬ್ರಿಟೀಷ್ ಅಧಿಕಾರಿಗಳ

ವಿರೋಧ ಕಟ್ಟಿಕೊಂಡು ಬದುಕುವುದು ಹೇಗೆ ಎಂದು ಹೆತ್ತವರು ಚಿಂತಿತರಾದರು.

**ಸ್ವಾತಂತ್ರ್ಯ ಹೋರಾಟ:**

ಡಾಂಗೆ ಅವರ ಹುಟ್ಟೂರು ಇಟನಾಳವಾದರೂ ಸ್ವಾತಂತ್ರ್ಯ ಚಳುವಳಿಯ ಕಾರ್ಯಾಚರಣೆಯ ಕೇಂದ್ರ ಹಿಡಕಲ್ಲೇ ಆಗಿತ್ತು. ಗ್ರಾಮದಲ್ಲಿ ರಾಮಪ್ಪ ಕಂಕಣವಾಡಿ ಮತ್ತು ತರುಣ ಹೋರಾಟಗಾರರಿಂದ ಸಂಘಟಿತಗೊಂಡ ಚಳಿವಳಿಕಾರರ ಗುಂಪನ್ನು ಸೇರಿಕೊಂಡರು. ನಂತರ ಹಿಡಕಲ್ಲ ಹೋರಾಟಗಾರರು ರೂಪಿಸಿದ ಎಲ್ಲಾ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದರು. ರಾತ್ರಿಗಳಲ್ಲಿ ನಡೆಯುತ್ತಲೇ ಪ್ರತಿ ಹಳ್ಳಿಗಳನ್ನು ಸುತ್ತಿ ಸ್ವಾತಂತ್ರ್ಯ ಹೋರಾಟದ ಜಾಗೃತಿ ಮೂಡಿಸುತ್ತಿದ್ದರು. ಸ್ವಾತಂತ್ರ್ಯದ ಕಿಚ್ಚನ್ನು ತುಂಬಿಕೊಂಡ ಜನರಿಂದ ಪ್ರತಿ ಹಳ್ಳಿಗಳಲ್ಲಿಯೂ ಬ್ರಿಟೀಷ್ ಅಧಿಕಾರಿಗಳಿಗೆ ದ್ವೇಷದ ಸ್ವಾಗತವೇ ದೊರೆಯುತ್ತಿತ್ತು. ಇದಕ್ಕೆ ಕಾರಣಗಳನ್ನು ಹುಡುಕುತ್ತ ಸಾಗಿದಾಗ ಬ್ರಿಟೀಷರಿಗೆ ಲಕ್ಷ್ಮಣ ಡಾಂಗೆ ಅವರ ಭಾಷಣಗಳು ಜನರನ್ನು ಹೆಚ್ಚು ಜಾಗೃತಿಗೊಳಿಸುತ್ತಿವೆ ಎಂಬುದು ಗೊತ್ತಾಯಿತು. ಚಳುವಳಿಗಾರರ ಗುಂಪಿನ ಜೊತೆಗೂಡಿ ಅನೇಕ ವಿಧಾಯಕ ಕಾರ್ಯಗಳಲ್ಲಿ ಭಾಗವಹಿಸಿ, ಶಿಕ್ಷೆಯನ್ನು ಅವರ ಜೊತೆಯೇ ಅನುಭವಿಸಿದರು ಎಂದು ಹಿಡಕಲ್ಲ ಗ್ರಾಮದ ರಾಮಣ್ಣ ಗುರುಸಿದ್ದಪ್ಪ ಕಂಕಣವಾಡಿ ಅವರು ಹೇಳುತ್ತಾರೆ. 1942ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ, ಮಧ್ವರಾಜ ದೇಶಪಾಂಡೆಯವರ ಮನೆಯಲ್ಲಿ ಅಥಣಿಯ ಅನಂತ ಶಾಮರಾವ ಕುಲಕರ್ಣಿಯವರು ನಡೆಸಿದ ಗುಪ್ತ ಸಭೆಗಳಲ್ಲಿ ಇವರು ಭಾಗವಹಿಸಿದ್ದರು. ಮಹಾಲಿಂಗಪೂರ ಪೋಸ್ಟ್ ಆಫೀಸನ್ನು ಸುಟ್ಟು ಹಾಕುವ, ಕುಡಚಿಜಮಖಂಡಿ ರಸ್ತೆಯ ಹಾರೂಗೇರಿ ಕ್ರಾಸ್ ಮತ್ತು ಯಬರಟ್ಟಿ ಮಧ್ಯದ ಟೆಲಿಗ್ರಾಫ್ ತಂತಿಯನ್ನು ಕತ್ತರಿಸುವ, ಯಲ್ಪಾರಟ್ಟಿ ಬಂಗಲೆ, ಸುಲದಾಳ ರೇಲ್ವೇ ಸ್ಟೇಷನ್ ಹಾಗೂ ರಾಯಬಾಗ ರೇಲ್ವೇ ಸ್ಟೇಷನ್ ಸುಡುವ ಕಾರ್ಯದಲ್ಲಿಯೂ ಭಾಗಿಗಳಾಗಿದ್ದರು.

1942ರ ಅಕ್ಟೋಬರ ತಿಂಗಳ 'ಚಲೆಜಾವ್' ಚಳುವಳಿಯಲ್ಲಿ ಇಮಾಮಸಾಹೇಬ ಮುಲ್ಲಾರ ನೇತೃತ್ವದ ತಂಡ ಅಥಣಿಯ ಪೋಸ್ಟ್ ಆಫೀಸನ್ನು ಸುಡುವ ಮತ್ತು ಸರ್ಕಾರಿ ಟ್ರೆಜರಿಯನ್ನು ಲೂಟಿ ಮಾಡುವ ಕಾರ್ಯದಲ್ಲಿದ್ದರು. ದುರ್ದೈವವಶಾತ್ ಚಿಮಣಿ(ಸೀಮೆ) ಎಣ್ಣೆ ದೊರೆಯದ್ದರಿಂದ ಕಛೇರಿ ಸುಡಲಾಗಲಿಲ್ಲ. ತಂಡದವರೆಲ್ಲರೂ ಸೇರಿ ಆಕ್ಟೋಬರ್ 2ರಂದು ಜಮಖಂಡಿ ಸಂಸ್ಥಾನದ ಹಿರೇಸಾವಳಗಿಯಲ್ಲಿ ಗಾಂಧಿ ಜಯಂತಿ ಆಚರಿಸಿ ಜನರಿಗೆ ಜಾಗೃತಿ ಮೂಡಿಸಿದರು. ಮರುದಿನ ಡಾಂಗೆ ಅವರು ಅಥಣಿಗೆ ಆಗಮಿಸಿ ಅಲ್ಲಿಂದ ಮಂಗಸೂಳಿಗೆ ಹೋಗಲು ಬಸ್‌ಸ್ಟಾಂಡಿನಲ್ಲಿ ಕಾಯುತ್ತಿದ್ದಾಗ ಕೊಕಟನೂರ ಗೌಡನ ಪಿತೂರಿಯಿಂದ 03101942ರಂದು ಪೊಲೀಸರು ಬಂಧಿಸಿದರು. ಇವರ ಕೈಚೀಲದಲ್ಲಿ ಕಬ್ಬಿಣ ಕೊರೆಯುವ ಎರಡು ಗರಗಸಗಳು, ಅದಕ್ಕೆ ಸಹಾಯಕವಾಗುವ ಇನ್ನೆರಡು ಸ್ಟೇಯರ್ ಬ್ಲೇಡ್‌ಗಳು, ಒಂದು ಕೈಬಾಚಿ, ಒಂದು ತುದಿಗೆ ಚಿಂದಿ ಬಟ್ಟೆಯಿಂದ ಸುತ್ತಲ್ಪಟ್ಟ ಬಿದರಿನ ಹಿಡಿಕೆಯುಳ್ಳ 6 ತಗಡಿನ ಜಕಳಿಗಳು, ಕಂಪನಿ ಸರ್ಕಾರದ ವಿರುದ್ಧದ ಕರಪತ್ರಗಳು ದೊರೆತವು. ಡಾಂಗೆ ಅವರನ್ನು ಪೊಲೀಸರು ಮನಬಂದಂತೆ ಥಳಿಸಿದರು. ವಿಚಾರಣೆಯ ನಂತರ ಬೆಳಗಾವಿಯ ಹಿಂಡಲಗಾ ಜೈಲಿಗೆ ವರ್ಗಾಯಿಸಿದರು. ಆ ಸಮಯದಲ್ಲಿ ವಾಜಪೇಯಿಯವರೂ ಅದೇ ಜೈಲಿನಲ್ಲಿದ್ದರು. ಹಾಗಾಗಿ ಅವರ ಜೊತೆಗೆ ಸಲುಗೆಯ ಸಂಪರ್ಕ ಬೆಳೆಯಿತು.

ಡಾಂಗೆ ಅವರ ಮೇಲೆ 'ಬೆಳಗಾವಿ ಜಿಲ್ಲಾ ಡಿವಿಜನಲ್ ಸೆಷನ್ ನ್ಯಾಯಾಲಯದಲ್ಲಿ, 1/1943 ನಂಬರ್ ಸ್ಪೆಷಲ್ ಕೇಸ್ ದಾಖಲಾಯಿತು. 56 ತಿಂಗಳು ನ್ಯಾಯ ವಿಚಾರಣೆ ನಡೆದು, ದಿನಾಂಕ 31031943ರ ಆದೇಶದಲ್ಲಿ, ದುರಭಿಪ್ರಾಯದ ಕರಪತ್ರ ಮತ್ತು ಸಾಹಿತ್ಯ ಪುಸ್ತಕಗಳನ್ನು

ಹೊಂದಿದ್ದಕ್ಕಾಗಿ, ಭಾರತೀಯ ರಕ್ಷಣಾತ್ಮಕ ಕಾಯ್ದೆಯ ಕಲಂ 39ರ ಬಿ ಪ್ರಕಾರ ಡಾಂಗೆ ಅವರನ್ನು ಒಳಗೊಂಡಂತೆ 14 ಜನರನ್ನು ವಿಚಾರಣೆಗೆ ಒಳಪಡಿಸಲಾಯಿತು. ಖಟ್ಲೆಯಲ್ಲಿ : ಹಿಡಕಲ್ಲ ಇಮಾಮ ಹುಸೇನಸಾಹೇಬ ಮುಲ್ಲಾ, ಬನಹಟ್ಟಿಯ ನಿಂಗಪ್ಪ ಪಾಯಪ್ಪ ಅಂಚಿನ, ಹಿಡಕಲ್ಲ ಲಕ್ಷ್ಮಣ ಅಣ್ಣಪ್ಪ ಡಾಂಗೆ, ಮೌಲಾಲಿ ಹುಸೇನ ಸಾಹೇಬ ಮುಲ್ಲಾ, ವಾಸುದೇವ ಅಲ್ಲಪ್ಪ ನಾಯಕ, ಭೀಮಾ ಮಾಯಪ್ಪ ಕದಮ, ಮಲ್ಲಪ್ಪಾ ಪರಪ್ಪ ಕೊಕಟನೂರ, ಹಿಡಕಲ್ಲ ಬಸವಪ್ರಭು ದುಂಡಪ್ಪ ದಲಾಲ, ಹಿಡಕಲ್ಲ ಶಂಕರಪ್ಪ ಬಸವಂತಪ್ಪ ಪತ್ತಾರ, ಸಾವಳಗಿ ಮಹಮ್ಮದ ಹೈದರ ಮೊಗುರ, ಸಾವಳಗಿ ಕೃಷ್ಣಾಬಾಳು ಚವ್ಹಾಣ, ಸಾವಳಗಿ ಬಸಗೌಡ ಪಮಗೌಡ ನ್ಯಾಮಗೌಡ, ಹಿಡಕಲ್ಲ ಮಾಧವ ಬಾಳಕೃಷ್ಣ ದೇಶಪಾಂಡೆ. ಈ ಪೈಕಿ ಇಮಾಮ ಹುಸೇನಸಾಹೇಬ ಮುಲ್ಲಾ, ನಿಂಗಪ್ಪ ಪಾಯಪ್ಪ ಅಂಚಿನ ಇವರಿಗೆ ತಲಾ ಮೂರೂವರೆ ವರ್ಷ ಶಿಕ್ಷೆಯಾಯಿತು. ಡಾಂಗೆಯವರಿಗೆ ವಿಧಿಸಲಾದ ಶಿಕ್ಷೆಯನ್ನು ಇಮಾಮ ಹುಸೇನಸಾಹೇಬ ಮುಲ್ಲಾ ಅವರು ಹೀಗೆ ಹೇಳುತ್ತಾರೆ. 'ಲಕ್ಷ್ಮಣ ಅಣ್ಣಪ್ಪ ಡಾಂಗೆ ಎಂಬ ನಮ್ಮ ಊರ ಜೊತೆಗಾರನಿಗೆ ಮತ್ತು ಮಹಮ್ಮದ ಹೈದರ್ ಮೊಗುರನಿಗೆ ಎರಡೂವರೆ ವರ್ಷ ಶಿಕ್ಷೆಯಾಯಿತು. ಮೌಲಾಲಿ ಹುಸೇನ ಸಾಹೇಬ ಮುಲ್ಲಾ ಹಾಗೂ ವಾಸುದೇವ ಅಲ್ಲಪ್ಪ ನಾಯಕ ಇವರಿಗೆ ತಲಾ ಮೂರು ವರ್ಷ ಶಿಕ್ಷೆಯಾಯಿತು. ಉಳಿದವರೆಲ್ಲರೂ ದೋಷಮುಕ್ತರಾದರು.

ಡಾಂಗೆ ಅವರು ಸೆರೆಮನೆಯಲ್ಲಿ ದಿವಿರಾತ್ರಿಯೂ ಭಾರತ ಮಾತೆಯು ಸ್ವತಂತ್ರಗೊಂಡಳೆಂಬ ಕನಸುಗಳನ್ನು ಕಾಣುತ್ತ ಭಾರತ ಮಾತಾಕೀ ಜೈ ಎಂದು ಕೂಗುತ್ತಲೇ ಇದ್ದರು. ಜೈಲಿನ ಅಧಿಕಾರಿಯೊಬ್ಬ ಜೈಕಾರ ಕೂಗುವುದನ್ನು ನಿಲ್ಲಿಸಬೇಕೆಂದು ಗದರಿಸಿ, ಊಟ ನೀಡದಿರುವ ಸಾಕಷ್ಟು ನಿದರ್ಶನಗಳಿವೆ. ಏಪ್ರಿಲ್ ತಿಂಗಳ 30ರಂದು 60 ಜನ ಕೈದಿಗಳ ಗುಂಪಿನೊಂದಿಗೆ ಲಕ್ಷ್ಮಣ ಡಾಂಗೆಯವರನ್ನು ವಿಜಾಪೂರ ಜೈಲಿಗೆ ಕಳುಹಿಸಲಾಯಿತು. ಆ ಜೈಲಿನಲ್ಲಿದ್ದಾಗ ತೀವ್ರ ಅನಾರೋಗ್ಯದಿಂದ ಬಳಲಿದರು. ಅವರನ್ನು 1944 ಡಿಸೆಂಬರ 12ರಂದು ಬಿಡುಗಡೆ ಮಾಡಲಾಯಿತು. ಜೈಲಿನಿಂದ ಮರಳಿದ ನಂತರವೂ ಸ್ವಾತಂತ್ರ್ಯ ಚಳುವಳಿಯಲ್ಲಿದ್ದ ಅವರು 1947ರ ಆಗಷ್ಟು ತಿಂಗಳಲ್ಲಿ ಸ್ವಾತಂತ್ರ್ಯ ಬರುವುದು ಗೊತ್ತಾಗಿ ಹಸಿವುನೀರಡಿಕೆಗಳನ್ನು ಬದಿಗೊತ್ತಿ ಇಡೀ ವಾರ ಬೆಳಗಾವಿಯಲ್ಲಿ ಹತ್ತಾರು ಜನರೊಂದಿಗೆ ಸೇರಿ ಭಾರತ ಮಾತಾಕೀ ಜೈ, ಮಹಾತ್ಮ ಗಾಂಧೀಜೀಕಿ ಜೈ ಎಂದು ಜಯಕಾರಗಳನ್ನು ಹಾಕುತ್ತ ಸಂತಸಪಟ್ಟರು. ಅದೇ ಅವಧಿಯಲ್ಲಿ 23 ತಿಂಗಳ ಅಭ್ಯಾಸ ಮಾಡಿ ಏಳನೆಯ ತರಗತಿಯಲ್ಲಿ ತೇರ್ಗಡೆಯಾದರು. ಜೈಲಿನ ಅನುಭವಗಳನ್ನು ಅವರೇ ಬರೆದಿದ್ದರೆ ಅದೊಂದು ಪ್ರತ್ಯೇಕ ಹೊತ್ತಿಗೆಯಾಗುತ್ತಿತ್ತು. ಅವರ ಹೋರಾಟದ ಸೇವೆಯನ್ನು ಗುರುತಿಸಿದ ಭಾರತ ಸರ್ಕಾರ, 1972ರ ಆಗಸ್ಟ್ 15ರಂದು ದಿಲ್ಲಿಯಲ್ಲಿ ರಾಷ್ಟ್ರಪತಿ ವಿ. ವಿ. ಗಿರಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ವಾತಂತ್ರ್ಯ ಯೋಧರ ಸನ್ಮಾನ ಸಮಾರಂಭದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಸ್ವಾತಂತ್ರ್ಯ ವೀರರೆಂದು ತಾಮ್ರಪತ್ರವನ್ನು ನೀಡಿ ಸನ್ಮಾನಿಸಿ ಗೌರವಿಸಿದರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ತಾರವ್ವ(ತಾರಾಬಾಯಿ) ಎನ್ನುವವರ ಜೊತೆ ಡಾಂಗೆ ಅವರ ವಿವಾಹವಾಯಿತು. ಈ ದಂಪತಿಗಳಿಗೆ ಪ್ರಕಾಶ, ಅಣ್ಣಪ್ಪ, ಚಿದಾನಂದ ಎಂಬ ಮೂರುಜನ ಗಂಡುಮಕ್ಕಳು, ಮಾಲಾ, ಅನುಸೂಯಾ ಎಂಬ ಎರಡು ಹೆಣ್ಣುಮಕ್ಕಳು ಜನಿಸಿದರು.

**ಸಮಾಜಮುಖಿ ಕಾರ್ಯಗಳು:**

ಅವಿರತ ಹೋರಾಟ, ಮಹಾತ್ಮಾಗಾಂಧೀಜಿಯವರ ಆದರ್ಶ, ದೇಶದ ಪರಿಸರ, ರಾಷ್ಟ್ರಸಮಾಜ, ತಮ್ಮ ಮನೆತನ, ಸಂಸಾರ ಇವುಗಳ ತಿಳುವಳಿಕೆ ಬಂದುದು

ಸೆರೆಮನೆಯಲ್ಲಿದ್ದಾಗ. ಆ ಕನಸುಗಳನ್ನು ನನಸಾಗಿಸಿಕೊಳ್ಳಲು ಜೀವಮಾನವೂ ಅವಿರತ ಶ್ರಮಿಸಿದರು. ಗಾಂಧೀಜಿಯವರ ವಿಧಾಯಕ ಕೆಲಸಗಳನ್ನು ನಂಬಿದ ಡಾಂಗೆ ಅವರ ಮನಸ್ಸು ಮೊದಲು ಸಮಾಜದ ಕಡೆಗೆ ದೃಷ್ಟಿ ಬೀರಿತು. ಸಮಾಜದ ಉದ್ಧಾರವೇ ರಾಷ್ಟ್ರದ ಉದ್ಧಾರವೆಂಬುದನ್ನು ಗ್ರಹಿಸಿದರು. ಭಾರತವೇ ತನ್ನ ಸಮಾಜವೆಂದುಕೊಂಡು 'ಮಾನವ ಕುಲವೇ ನನ್ನ ಕುಟುಂಬ' ಎಂಬ ಅರಿವು, ದರಿದ್ರರೇ ದೇವರು ಎಂಬ ವಿವೇಕವಾಣಿ ಇತ್ಯಾದಿ ಚಿಂತನೆಗಳನ್ನು ಇಟ್ಟುಕೊಂಡರು. 1945ರ ಆಗಸ್ಟ್ 15ರಂದು ಬೆಳಗಾವಿಯಲ್ಲಿ ಕುರುಬ ಸಮುದಾಯದ ಧುರೀಣರೊಂದಿಗೆ ಸೇರಿ ಅಖಿಲ ಕರ್ನಾಟಕ ಕುರುಬರ ಉಚಿತ ಪ್ರಸಾದ ನಿಲಯವನ್ನು 'ವಿಜಯನಗರ ವಿದ್ಯಾರ್ಥಿ ನಿಲಯ' ವೆಂಬ ಹೆಸರಿನಲ್ಲಿ ಸ್ಥಾಪಿಸಿದರು. ಅದರ ಪ್ರಮುಖ ರೂವಾರಿ, ಕಾರ್ಯದರ್ಶಿ ಲಕ್ಷ್ಮಣ ಡಾಂಗೆಯವರು. ಬಳಿಕ ಈ ವಿದ್ಯಾರ್ಥಿ ನಿಲಯವನ್ನು ಬೆಳಗಾವಿಯ ಕಿಲ್ಲೆಯೊಂದರ ಬೃಹತ್ ಕಟ್ಟಡ ಒಂದಕ್ಕೆ ವರ್ಗಾಯಿಸಲಾಯಿತು. ಹೊಸ ಕಟ್ಟಡಕ್ಕಾಗಿ ಸರಕಾರದಿಂದ ಭೂಮಿವನ್ನೂ ದಾನ ಕೇಳಿದರು. ಅವರೊಂದಿಗೆ ಶ್ರೀ ಗವಿಸಿದ್ದಪ್ಪ ಬೆಳವಡಿ, ಎನ್.ಬಿ. ದಳವಾಯಿ ವಕೀಲರು ಹಾಗೂ ಕೆಲವು ಹಿರಿಯರು ಕೈಗೂಡಿಸಿದರು. ಡಾಂಗೆಯವರ ಮನವಿಯನ್ನು ಸ್ವೀಕರಿಸಿದ ಬಿ.ಡಿ. ಜತ್ತಿಯವರು ಸರಕಾರದಿಂದ ಭೂಮಿ ನೀಡಲು ಒಪ್ಪಿಗೆ ನೀಡಿದರು. ಈ ಸ್ಥಳವು ವಿದ್ಯಾರ್ಥಿಗಳಿಗೆ ಅನುಕೂಲಕರ ಸ್ಥಳವಾಯಿತು. ಹಿರೇಕುಂಬಿಯ ಗವಿಸಿದ್ದಪ್ಪ ಬೆಳವಡಿ, ಅಥಣಿಯ ನಿಂಗಪ್ಪ ಬಹದ್ದೂರ ದಳವಾಯಿ, ಗೋಕಾಕ ತಾಲೂಕಿನ ಸ್ವಾತಂತ್ರ್ಯ ಯೋಧರಾದ ಹುಕ್ಕಬುಕ್ಕರೆಂದು ಹೆಸರು ಪಡೆದ ಶ್ರೀ ಯಮನಪ್ಪ, ಸಿ. ಅರಭಾವಿ ಮತ್ತು ಶ್ರೀ ಉದ್ದಪ್ಪ, ಕೆ. ಎತ್ತಿನಮನಿ ಮುಂತಾದ ಹಿರಿಯರ ಸಹಾಯ ಸಲಹೆ ಸಹಕಾರಗಳಿಂದ ವಿದ್ಯಾರ್ಥಿನಿಲಯವೂ ನಿರಂತರವಾಗಿ ಅನ್ನದಾಸೋಹ ನೀಡುತ್ತ ಹಿಂದುಳಿದ, ದೀನದಲಿತರ ಮಕ್ಕಳಿಗೆ ಅಕ್ಷರ ದಾಸೋಹವನ್ನು ಉಣಬಡಿಸುತ್ತ ಬಂದಿತು. ಅದರ ಕಾರ್ಯದರ್ಶಿಯಾಗಿ ಹಳ್ಳಿಹಳ್ಳಿಗಳಿಗೆ ತೆರಳಿ ಹೋಗಿ ಕಾಳುಕಡಿ ಕೂಡಿಸುತ್ತಲೇ ಆ ಪ್ರಸಾದ ನಿಲಯವನ್ನು 1970ರವರೆಗೂ ನಡೆಸಿಕೊಂಡು ಬಂದರು. ಕಾರ್ಯದರ್ಶಿಯಾಗಿದ್ದ ಸಮಯ(1963)ದಲ್ಲಿ ಒಮ್ಮೆ ಯಾವುದೋ ಕೆಲಸದ ನಿಮಿತ್ತ ಗೋಕಾಕಕ್ಕೆ ಬಂದಿದ್ದರು. ಗೋಕಾಕ ಪೇಟೆಯಲ್ಲಿ ನಡೆಯುತ್ತ ಹೋಗುತ್ತಿರುವಾಗ ಒಂದೂವರೆ ತೊಲೆಯ ಚಿನ್ನದ ಚೈನು ಸಿಕ್ಕಿತು. ಆ ಕುರಿತು ಪತ್ರಿಕೆಯಲ್ಲಿ ಪ್ರಕಟಣೆ ನೀಡಿ, ಅದನ್ನು ಮಾಲೀಕರಾದ ಕೌಜಲಗಿ ಊರಿನ ಯಲಿಗಾರ ಅವರಿಗೆ ಒಪ್ಪಿಸಿದರು. ಇದರಿಂದ ಸಂತಸಗೊಂಡ ಯಲಿಗಾರರು ಡಾಂಗೆ ಅವರಿಗೆ ನಿಮಗೇನು ಕೊಡಲಿ ಎಂದು ಕೇಳಿದರು. ಡಾಂಗೆ ಅವರು ಬೋರ್ಡಿಂಗ್‌ನಲ್ಲಿ ಕಲಿಯುತ್ತಿರುವ ಬಡ ವಿದ್ಯಾರ್ಥಿಗಳಿಗಾಗಿ ಒಂದು ಚೀಲ ಅಕ್ಕಿ ಕೊಡಿಸಿರೆಂದು ಹೇಳಿದರು. ಹೀಗೆ ಅವರಿಂದ ಒಂದು ಚೀಲ ಅಕ್ಕಿಯನ್ನು ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸಿದರು.

ಡಾಂಗೆಯವರಿಗೆ ಸಮಾಜದ ಕಟ್ಟಕಡೆಯಲ್ಲಿರುವ ಜನಸಮುದಾಯಗಳು ಅರಿವಿನೆಡೆಗೆ ಬರುತ್ತಿರುವುದಕ್ಕೆ ತುಂಬಾ ಸಂತಸಪಟ್ಟರು. ಉಚಿತ ಪ್ರಸಾದ ನಿಲಯವಿದ್ದರಿಂದ ಬೆಳಗಾವ ಜಿಲ್ಲೆಯ ಮೂಲೆ ಮೂಲೆಗಳಿಂದ ವಿದ್ಯಾರ್ಥಿಗಳು ಬರತೊಡಗಿದರು. ಕೇವಲ ತಮ್ಮ ಸಮುದಾಯಕ್ಕಷ್ಟೇ ಈ ವಸತಿ ನಿಲಯ ಸೀಮಿತವಾಗದೆ, ಇತರೆ ಹಿಂದುಳಿದ, ದಲಿತ ವಿದ್ಯಾರ್ಥಿಗಳಿಗೂ ಮುಕ್ತ ಅವಕಾಶ ದೊರೆಯಿತು. ಹೀಗಾಗಿ 'ವಿಜಯನಗರ ಬೋರ್ಡಿಂಗ್ ಜಾತ್ಯಾತೀತ ಬೋರ್ಡಿಂಗ್' ಎಂಬುದಾಗಿಯೇ ಹೆಸರಾಯಿತು. ಕುರುಬರಿರುವ ಊರುಗಳಿಗೆ ನಡೆದೋ, ಸೈಕಲ್ ಸವಾರಿ ಮಾಡುತ್ತಲೋ ಹೋಗಿ ಊರಿನ ಮುಖಂಡರಿಗೆಹಿರಿಯರಿಗೆ ತಿಳಿಸಿ, ದಾನದೇಣಿಗೆಗಳನ್ನು ಪಡೆಯುತ್ತಿದ್ದರು. ಜೋಳ, ಗೋದಿ, ಗೋವಿನ ಜೋಳ, ಭತ್ತ,

ಅಕ್ಕಿ, ಮೆಣಸಿನಕಾಯಿ, ಕುಂಬಳಕಾಯಿ, ಉಳ್ಳಾಗಡ್ಡಿ, ಬಳ್ಳೊಳ್ಳಿ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಕೂಡಿಸಿಕೊಂಡು ವಿದ್ಯಾರ್ಥಿ ನಿಲಯ ಬೆಳಗಾವಿಗೆ ತರುತ್ತಿದ್ದರು. ದಾನ ನೀಡಿದವರ ಹೆಸರುಗಳನ್ನು ಬರೆದು ದಾಖಲೆಯಿಡುತ್ತಿದ್ದರು. ಸಭೆ ನಡೆದಾಗ ದಾನಿಗಳ ಹೆಸರುಗಳನ್ನು ಹೇಳುತ್ತಿದ್ದರು. ಮದುವೆ, ಆಫೀಸುಗಳಿಗೂ ಭೇಟಿ ನೀಡಿ ದೇಣಿಗೆ ಪಡೆಯುತ್ತಿದ್ದರು. ಹೀಗೆ ವರ್ಷದುದ್ದಕ್ಕೂ ಸಂಚಾರ ಕೈಕೊಂಡು, ಧವಸಧಾನ್ಯಗಳನ್ನು ಪಡೆದು ವಿದ್ಯಾರ್ಥಿನಿಲಯಕ್ಕೆ ತರುತ್ತಿದ್ದರು. ದಾನಿಗಳನ್ನು ನಿಲಯಕ್ಕೆ ಕರೆಸಿ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸುತ್ತಿದ್ದರು. ವಿಜಯನಗರದ ವಿದ್ಯಾರ್ಥಿನಿಲಯವು ಸಮಾಜದ ಹಿಂದುಳಿದ, ದಲಿತರ ಮಕ್ಕಳನ್ನು ವಿದ್ಯಾವಂತರಾಗಿಸುವ ಜೊತೆಗೆ, ಮುಂದಿನ ಭವ್ಯ ಭಾರತದ ಪ್ರಜೆಗಳಾಗಿ ರೂಪಿಸಬೇಕೆಂಬ ಕನಸನ್ನು ಕಂಡಿದ್ದರು. ಇಂಥ ನಿಸ್ವಾರ್ಥ ಸೇವೆಯನ್ನೇ ಬದುಕಿನ ಭಾಗವಾಗಿಸಿಕೊಂಡು ಬಾಳಿದ ಲಕ್ಷ್ಮಣ ಡಾಂಗೆಯವರ ವ್ಯಕ್ತಿತ್ವದಿಂದಾಗಿ ಈ ನಿಲಯಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಜನರು ದವಸಧಾನ್ಯಗಳನ್ನು ದಾನವಾಗಿ ನೀಡುತ್ತಿದ್ದರು. ಇಂಥ ಧೀಮಂತ ವ್ಯಕ್ತಿಯು ಸಂಸಾರದೊಂದಿಗೆ ಬೋರ್ಡಿಂಗ್‌ನಲ್ಲಿ ವಾಸವಾಗಿದ್ದಾರೆ ಎಂಬ ಕಾರಣಕ್ಕೆ ಕೆಲವರು ಕೆಂಗಣ್ಣು ಬೀರಿ, ಅವರನ್ನು ಪರೀಕ್ಷಿಸಲು ಅಣಿಯಾದರು. ಮಹಾತ್ಮ ಗಾಂಧೀಜಿಯವರ ಖರ್ಚಿನ ವರದಿಯಂತೆ ಇತ್ತು ಅವರ ಲೆಕ್ಕ. 195455ರ ಜಮಾಖರ್ಚಿನ ಪಟ್ಟಿಯನ್ನು ತೋರಿಸಿದರು. ಅಂತು ಒಟ್ಟು ಜಮಾ 7102 ರೂಪಾಯಿ, 10 ಆಣೆ, 9 ಪೈಸೆಯಾಗಿತ್ತು. ಅಂತೂ ಒಟ್ಟು ಖರ್ಚು 6940 ರೂಪಾಯಿ, 13 ಆಣೆ, 3 ಪೈಸೆಯಾಗಿತ್ತು. ಉಳಿದದ್ದು ನಾಳಿನ ಶಿಲ್ಕು ಹಾಗೂ ಅಕ್ಕಿ, ಗೋದಿ ಹಾಗೂ ಇತರ ಆಹಾರ ಪದಾರ್ಥಗಳು ಬಹುವಾಗಿ ಶಿಲ್ಕುಗೊಂಡಿದ್ದವು. 810 ಹಾಸಿಗೆಗಳು ದಾನಿಗಳಿಂದ ಬಂದಿದ್ದವು. ಅಡಿಗೆ ತಯಾರಿಸುವ ಪಾತ್ರೆಗಳನ್ನೂ ಜಮಾಯಿಸಿದ್ದರು. ಇವರ ಗಳಿಕೆ ಬಳಕೆ ಹಾಗೂ ಉಳಿಕೆಯ ಪತ್ರಗಳು ಬಸವಣ್ಣನಂತಿವೆ. 'ಊರಿಗೊಬ್ಬ ಬಸವಣ್ಣನಿದ್ದರೆ ಊರೇ ಪಾವನ'. ನಮಗೆ ಉಚಿತವಾಗಿ ಲಕ್ಷ್ಮಣನೆಂಬ ಬಸವಣ್ಣ ಬೋರ್ಡಿಂಗ್‌ಗೆ ದೊರಕಿದ್ದಾನೆಂದು ಹೊಗಳಿ ಹೋದರು ಪರೀಕ್ಷಕರು. ಅವರ ನಿಸ್ವಾರ್ಥ ಸೇವೆಯು 1945 ರಿಂದ 1975ರವರೆಗೆ ನಡೆದುಬಂದಿತು. ಈ ಪ್ರಾಮಾಣಿಕತೆಯು ತಂದೆತಾಯಿಗಳ ಬಳುವಳಿ ಎಂದು ತುಂಬಾ ವಿನಮ್ರವಾಗಿ ಡಾಂಗೆ ಅವರೇ ತಮ್ಮ ಹಿತೈಷಿಗಳ ಹತ್ತಿರ ಹೇಳುತ್ತಿದ್ದರು.

1950 ಏಪ್ರಿಲ್ 22ರಿಂದ ಒಂದು ವರ್ಷ ಕಾಲ ಕಾಂಗ್ರೆಸ್ ಸೇವಾದಳದಲ್ಲಿ ಸೇರಿ ಕಾರ್ಯಕರ್ತರಾಗಿ ಕೆಲಸಗಳನ್ನು ಮಾಡಿದ್ದರು. ಮುಂದೆ 1965 ರಿಂದ 1968 ರವರೆಗೆ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸೇವಾದಳದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಹರಿಜನೋದ್ಧಾರ ಕೆಲಸವು ಇವರಿಂದ ಸಾಗಿತು. ಪ್ರತಿ ರವಿವಾರ ಕೆಲವು ಜನರನ್ನು ಕೂಡಿಕೊಂಡು ಒಂದೊಂದು ಗ್ರಾಮಕ್ಕೆ ತೆರಳಿ ಅಲ್ಲಿನ ಹರಿಜನ ಕೇರಿಯನ್ನು ಸ್ವಚ್ಛ(ಸಫಾಯಿ) ಮಾಡುವ ನೇಮಕ್ಕೆ ಬದ್ಧರಾದರು. ಇದನ್ನು ಕಂಡು ಬೆಳಗಾವಿಯ ಜಯದೇವರಾವ ಕುಲಕರ್ಣಿಯವರು ಒಂದು ಟೆಂಪೋವನ್ನು ಅವರಿಗೆ ಉಚಿತವಾಗಿ ನೀಡಿದರು. ಮಹಾತ್ಮಾಗಾಂಧೀಜಿಯವರ ಮಾರ್ಗದರ್ಶನದಲ್ಲಿಯೇ ನಡೆಯುತ್ತಿದ್ದ ಜಯದೇವ ಕುಲಕರ್ಣಿಯವರು ಸ್ವಾತಂತ್ರ್ಯ ಯೋಧರಾಗಿದ್ದರು. ಡಾಂಗೆಯವರು ವಸತಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಬೆಳಗಿನ ಪ್ರಾರ್ಥನೆಯಿಂದ ಮೊದಲ್ಗೊಂಡು, ದೈನಂದಿನ ಕಾರ್ಯಚಟುವಟಿಕೆಗಳಿಗೆ ಚೇತನ ನೀಡುವವರಾಗಿದ್ದರು. 1963ರಲ್ಲಿ ವಿದ್ಯಾರ್ಥಿಗಳನ್ನು ಬೆಳಗಾವಿಗೆ ಕರೆದುಕೊಂಡು ಹೋಗಿ ಗಾಯಾಳು ಸೈನಿಕರಿಗೆ ರಕ್ತದಾನ ಮಾಡಿಸಿದರು.

ಗಾಂಧೀಜಿಯವರಿಗಿಂತಲೂ ಮೊದಲು ತಮಗೆ ಗುರು ಭಗವಾನ ಬುದ್ಧರೆಂದು

'ಬುದ್ಧಂ ಶರಣಂ ಗಚ್ಚಾಮಿ ಸಂಘಂ ಶರಣಂ ಗಚ್ಚಾಮಿ' ಅದೇ ನನ್ನ ಮಾತುಮಂತ್ರ ಎನ್ನುತ್ತಾರೆ. ಮಹತ್ವದ ಕವಿಗಳಾದ ಈಶ್ವರ ಸಣಕಲ್ಲರು ದಿನಾಂಕ : 1581955ರಂದು ವಿಜಯನಗರ ವಿದ್ಯಾರ್ಥಿ ನಿಲಯಕ್ಕೆ ಬಂದು ನಿರೀಕ್ಷಿಸಿ, ಕವಿತೆಯೊಂದನ್ನು ರಚಿಸಿದರು.

**ಓ ಈ ನಿಲಯಂ**
**ಪ್ರಶಾಂತ ವಲಯಂ**
**ತಪದಲಿ ನಿಂತಿದೆ**
**ತುರುರಾಶಿ!**
**ಸುರಿದಿದೆ ತಂಪನು**
**ಪೆಂಪನು ಕಂಪನು**
**ಮಲ್ಲಿಗೆ ಗುಲಾಬಿ**
**ವರರಾಶಿ!**

ಹೀಗೆ ನಿಲಯದ ಸ್ವಚ್ಛತೆಯ ಬಗೆಗೂ ಹಾಗೂ ಮಾನವೀಯತೆಯ ಬಗೆಗೂ ಐದು ನುಡಿಗಳನ್ನು ರಚಿಸಿದ್ದಾರೆ.

**ಏಳು ಮಾನವತೆಯೇ**
**ಏಳು ನವನವತೆಯ**
**ಮೌಢ್ಯದ ಜಾಡ್ಯವ**
**ಹುಡಿಗಟ್ಟು!**
**ರಸದಾದರ್ಶನ**
**ದಿವ್ಯ ಸ್ಪರ್ಶನ**
**ಮೂಡಿಸಿ ಹಿಗ್ಗಿನ**
**ಗುಡಿಗಟ್ಟು!**

ಲಕ್ಷ್ಮಣ ಅಣ್ಣಪ್ಪ ಡಾಂಗೆಯವರ ವ್ಯಕ್ತಿತ್ವಕ್ಕೊಂದು ನಿದರ್ಶನವಿದು. 1945 ರಿಂದ 1975ರವರೆಗೆ ಮೂರು ದಶಕಗಳ ಕಾಲ ಕ್ರಿಯಾತ್ಮಕವಾಗಿ ಪರರ ಹಿತಕ್ಕಾಗಿ ದುಡಿದ ಮಹನೀಯರು. ತಮ್ಮ ಹುಟ್ಟೂರಿನ ಹೆಸರಲ್ಲಿ 'ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಸಂಸ್ಥೆ ಇಟನಾಳ' ಸೇವಾದಳದ ಸಂಘ ಸ್ಥಾಪಿಸಿ, ಅದರ ಅಧ್ಯಕ್ಷರಾಗಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಆಸರೆಯಾಗಿ ಕಾರ್ಯ ನಿರ್ವಹಿಸಿದರು. ಬದುಕಿರುವಷ್ಟು 82 ವರ್ಷಗಳ ಸುದೀರ್ಘಕಾಲವೂ ಸಮಾಜಮುಖಿಯಾಗಿ ಜೀವಿಸಿದ ಡಾಂಗೆ ಅವರು 16, ನವೆಂಬರ್, 2004ರಂದು ಶಿವಪಾದರಾದರು. ಡಾಂಗೆ ಅವರ ಸ್ವಾತಂತ್ರ್ಯ ಯೋಧರ ನಿವೃತ್ತಿ ವೇತನವನ್ನು ಸದ್ಯ ಇವರ ಧರ್ಮ ಪತ್ನಿಯವರು ಪಡೆಯುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ನಾರಾಯಣರಾವ್ ವಿ. ಎಸ್., ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀಸಾಮಾನ್ಯ, 1978, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
2. ಬಾಲಾಜಿ ಯ. ದೇಶಪಾಂಡೆ, ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ ಸಂಪುಟ 12, 1973, ಬೆಳಗಾವಿ ಜಿಲ್ಲೆಯ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾವಿ
3. ಮನೋಜ ಪಾಟೀಲ(ಸಂ), ಬೆಳಗಾವಿ ಜಿಲ್ಲೆಯ ಮಾರ್ಗದರ್ಶಿ, 1987, ಪವನ ಪ್ರಕಾಶನ, ಬೆಳಗಾವಿ
4. ಮೃತ್ಯುಂಜಯ ರುಮಾಲೆ, ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕಬೆಳಗಾವಿ, 2022, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
5. ರಾಜಣ್ಣ ತಿ. ಎಸ್.(ಸಂ), ಬೆಳಗಾವಿ ಜಿಲ್ಲೆಯ ಲಾವಣಿಗಳು, 1973, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
6. ಸರೋಜಿನಿ ಚವರಾಲ, ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು, 1988, ಶ್ರೀ ಜೆ.ಗಿ. ಪ್ರಸಾರಕ ಮಂಡಳ, ಮೂರುಸಾವಿರಮಠ, ಹುಬ್ಬಳ್ಳಿ
7. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ3, 1974, ಗೀತಾ ಬುಕ್‌ಹೌಸ್, ಮೈಸೂರು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.